ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ , ಕುಂದಾಪುರ

ಸಿ.ಸಿ. ನಂಬ್ರಃ 1603/2018

ಚಾಸಾಃ 9 ಪ್ರಾಸಾಃ8

ದಿನಾಂಕಃ 02.09.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ರಾಜು ಗೌಡ |
| ತಂದೆಯ ಹೆಸರು | : | ಸುಬ್ರಯ ಗೌಡ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಸಿ ಪಿ ಸಿ 1097 |
| ವಾಸ ಸ್ಥಳ | : | ಮಂಕಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ</u>**

ನಾನು ದಿಃ 25-10-2016 ರಿಂದ ದಿಃ 22-06-2022ರವರೆಗೆ ಭಟ್ಕಳ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 25-12-2017 ರಂದು ಚಾಸಾ-8ರವರ ಜೊತೆಗೆ ಭಟ್ಕಳ ಗ್ರಾಮೀಣ ಪೊಲೀಸ್ ಠಾಣೆಯ ಶಿರಾಲಿ ಚೆಕ್ ಪೋಸ್ಟ್ ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಬೆಳಿಗ್ಗೆ ಸುಮಾರು 10 ಗಂಟೆಗೆ ಹೊನ್ನವಾರ ಕಡೆಯಿಂದ ಭಟ್ಕಳ ಕಡೆಗೆ ಒಂದು swift ಗಾಡಿ ಬರುತ್ತಿದ್ದು ಅದನ್ನು ನಿಲ್ಲಿಸುವಂತೆ ಕೈ ಸನ್ನೆ ಮಾಡಿದ್ದು, ಗಾಡಿಯಲ್ಲಿ ಇದ್ದವರು ಸ್ವಲ್ಪ ಮುಂದೆ ಹೋಗಿ ನಿಲ್ಲಿಸಿ ಓಡಲು ಪ್ರಾರಂಭಿಸಿರುತ್ತಾರೆ. ನಂತರ ಚಾಸಾ-8ರವರ ಜೊತೆಗೆ ಒಬ್ಬ ವ್ಯಕ್ತಿಯನ್ನು ಹಿಡಿದು ಬಂದಿದ್ದ ಕಾರಿನ ಕಾಗದ ಪತ್ರಗಳನ್ನು ಕೇಳಿದಾಗ ಅವನು ಕಾಗದವನ್ನು ತೋರಿಸಿರುವುದಿಲ್ಲ. ಅವರನ್ನು ವಿಚಾರಿಸಿ ಕೇಳಿದಾಗ ಕುಂದಾಪುರದ ಕಡೆಯಿಂದ ಕಳ್ಳತನ ಮಾಡಿ ತನ್ನ ವಾಹನವೆಂದು ತಿಳಿಸಿದ್ದು, ಸದ್ರಿ ವ್ಯಕ್ತಿಯ ಹೆಸರು ಕೃಷ್ಣ ಆಚಾರ್ಯ ಎಂದು ತಿಳಿಸಿರುತ್ತಾರೆ. ನಂತರ ಪ್ರಾಸಾ-8ರವರು ಆರೋಪಿ ಮತ್ತು ಕಾರನ್ನು ವಶಕ್ಕೆ ಪಡೆದು ಠಾಣೆಗೆ ಕರೆದುಕೊಂಡು ಮುಂದಿನ

ವಿಚಾರಣೆಗಾಗಿ ಹಾಜರುಪಡಿಸಿರುತ್ತಾರೆ. 1ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ನಿಪಿ-4ನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಕೆ ಎಂ ಐ ರವರಿಂದಃ</u>**

ತಕ್ಷೀರು ಸ್ಥಳಕ್ಕೆ ಬೆಳಿಗ್ಗೆ 9-30ಕ್ಕೆ ನಾನು ಠಾಣೆಯಿಂದ ಹೊರಟಿರುತ್ತೇನೆ. ನನ್ನ ಜೊತೆಗೆ ಚಾಸಾ-8ರವರು ಇದ್ದರು. 10 ನಿಮಿಷದಲ್ಲಿ ಸ್ಥಳಕ್ಕೆ ತಲುಪಿರುತ್ತೇವೆ. ಠಾಣೆಯಿಂದ ತಕ್ಷೀರು ಸ್ಥಳ 2 ರಿಂದ 3 ಕಿ.ಮೀ ದೂರದಲ್ಲಿ ಇದೆ. ಸದ್ರಿ ದಿನ ನಾವು ಸುಮಾರು 4-5 ವಾಹನಗಳ ತಪಾಸಣೆ ಮಾಡಿರುತ್ತೇವೆ. ಆರೋಪಿ ಕಳ್ಳತನ ಮಾಡಿದ ಬಗ್ಗೆ ನಮಗೆ ಪೂರ್ವ ಮಾಹಿತಿ ಇರಲಿಲ್ಲ ವಿಚಾರಣೆ ಮಾಡಿದ ನಂತರ ತಿಳಿದು ಬಂದಿರುತ್ತದೆ. ವಾಹನವನ್ನು ನಿಲ್ಲಿಸುವಂತೆ ಚಾಸಾ-8 ರವರು ಸೂಚಿಸಿದ್ದು ನಾನು ಕ್ರಮ ವಹಿಸಿರುತ್ತೇನೆ. ಚಾಸಾ-8ರವರು ಆ ಸಮಯದಲ್ಲಿ ರಸ್ತೆಯ ಪಕ್ಕದಲ್ಲಿ ನಿಂತಿದ್ದರು. ನಾವು ತಡೆದ 50 ಮೀಟರ್ ದೂರದಲ್ಲಿ ವಾಹನ ನಿಲ್ಲಿಸಿರುತ್ತಾರೆ.

1ನೇ ಆರೋಪಿ ಹಿಂದೆ ಓಡುತ್ತಿದ್ದರು. ವಾಹನದಿಂದ ಎಷ್ಟು ಅಡಿ ದೂರದಲ್ಲಿ 1ನೇ ಆರೋಪಿಯನ್ನು ಹಿಡಿದಿದ್ದು ಎಂದು ನನಗೆ ನಿಖರವಾಗಿ ನೆನಪಿಲ್ಲ. ಮೊದಲಿಗೆ ನಾನೇ ಆತನನ್ನು ಹಿಡಿದಿರುತ್ತೇನೆ. ಉಳಿದ ಆರೋಪಿತರನ್ನು ಬಂಧಿಸಲು ಪ್ರಯತ್ನಿಸಿದ್ದು ಅವರು ತಪ್ಪಿಸಿಕೊಂಡಿರುತ್ತಾರೆ. ಉಳಿದವರನ್ನು ಚಾಸಾ-8ರವರು ಮಾತ್ರ ಬೆನ್ನಟ್ಟಿರುತ್ತಾರೆ. ನಾನು 1ನೇ ಆರೋಪಿಯನ್ನು ಹಿಡಿದುಕೊಂಡಿದ್ದೆ. ಆ ಸಮಯದಲ್ಲಿ ವಾಹನವನ್ನು ಯಾರು ಚಲಾಯಿಸುತ್ತಿದ್ದರು ಎಂದು ನಿಖರವಾಗಿ ನೆನಪಿಲ್ಲ. 1ನೇ ಆರೋಪಿ ವಾಹನದ ಯಾವ ಭಾಗದಲ್ಲಿ ಕುಳಿತುಕೊಂಡಿದ್ದ ಎಂದು ಗಮನಿಸಿಲ್ಲ.

ಘಟನಾ ಸ್ಥಳದಲ್ಲಿ ಯಾವುದೇ ದಾಖಲೆ ಮಾಡಿದ ಬಗ್ಗೆ ನೆನಪಿಲ್ಲ. ತಕ್ಷೀರಿನ ಬಗ್ಗೆ ಠಾಣೆಗೆ ಮಾಹಿತಿ ನೀಡಿದ ಬಗ್ಗೆ ನನಗೆ ನೆನಪಿಲ್ಲ. ನನಗೆ ಸದ್ರಿ ಪ್ರಕರಣದ ಬಗ್ಗೆ ನಮೂದು ಮಾಡಿರುವ ಬಗ್ಗೆ ಯಾವುದೇ ಮಾಹಿತಿ ಇಲ್ಲ. ತಕ್ಷೀರು ಸ್ಥಳದಲ್ಲಿ 1ನೇ ಆರೋಪಿಯ ಯಾವುದೇ ಸ್ವ ಖುಷಿ ಹೇಳಿಕೆ ಪಡೆದಿಲ್ಲ. ಕಬೂಲಾತಿ ಹೇಳಿಕೆಯನ್ನು ಠಾಣೆಯಲ್ಲಿ ಯಾರು ಪಡೆದರು ಎಂದು ನನಗೆ ತಿಳಿದಿಲ್ಲ. ಸ್ಥಳದಲ್ಲಿ ಸದ್ರಿ ದಿನದ ಎಷ್ಟು ದಿನಗಳ ಮೊದಲು ವಾಹನವನ್ನು ಕಳ್ಳತನ ಮಾಡಿದ್ದಾರೆ ಎಂದು ವಿಚಾರಿಸಿಲ್ಲ. ಆರೋಪಿ ವಾಹನವನ್ನು ಕಳ್ಳತನ ಮಾಡಿದ್ದ ಬಗ್ಗೆ ಸ್ಥಳದಲ್ಲಿ ಪರಿಶೀಲನೆ ಮಾಡಿಲ್ಲ. ನನ್ನ ಸಮಕ್ಷಮ ಬೇರೆ ಯಾವುದೇ ಸಾಕ್ಷಿಗಳನ್ನು ಪಡೆದುಕೊಂಡಿಲ್ಲ. ಆರೋಪಿ ಕಾರನ್ನು ಎಲ್ಲಿ ಕಳ್ಳತನ ಮಾಡಿದ್ದಾನೆ ಎಂಬ ಬಗ್ಗೆ ಸ್ಥಳಕ್ಕೆ ನನ್ನನ್ನು ಕರೆದುಕೊಂಡು ಹೋಗಿಲ್ಲ. ತನಿಖಾಧಿಕಾರಿ ಸದ್ರಿ ಸ್ಥಳಕ್ಕೆ ಭೇಟಿ ಮಾಡಿದ್ದ ಬಗ್ಗೆ ನನಗೆ ತಿಳಿದಿಲ್ಲ.

ಆರೋಪಿ ಯಾವುದೇ ವಾಹನವನ್ನು ಕಳ್ಳತನ ಮಾಡಿಲ್ಲ ಎಂದರೆ ಸರಿಯಲ್ಲ. ಕೇವಲ ಅಂಕಿ ಸಂಖ್ಯೆಗಳಿಗೊಸ್ಕರ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ತಕ್ಷೀರು ಸ್ಥಳದಲ್ಲಿ ಆರೋಪಿಯನ್ನು ಬಂಧಿಸಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಯವರ ಒತ್ತಡದ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ತಕ್ಷೀರು ನಡೆದಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲಿಗೂ ಆರೋಪಿಗೂ ಯಾವುದೇ

ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಮ್ಮ ಠಾಣಾ ವ್ಯಾಪ್ತಿಯಲ್ಲಿ ಪತ್ತೆಯಾಗದ ಪ್ರಕರಣದಲ್ಲಿ ಈ ಆರೋಪಿಯನ್ನು ಸೇರಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**